



# ಉನ್ನತ ಜೀವನ -೨

❑ ಡಾ. ಇ. ವಸಂತ ಕುಮಾರ್

**ಭಾರತೀಯ ದೃಷ್ಟಿಯಲ್ಲಿನ ಉನ್ನತ ಜೀವನದ ಪರಿಕಲ್ಪನೆಯಲ್ಲಿ ಪರಿಪೂರ್ಣ ವ್ಯಕ್ತಿತ್ವದ ವಿಕಸನದ ಪ್ರಮುಖವಾದ ಕೆಲವು ಮಜಲುಗಳನ್ನು ಈ ಕಂತಿನಲ್ಲಿ ಲೇಖಕರು ಸೂಕ್ಷ್ಮವಾಗಿ ಪರಿಚಯಿಸಿದ್ದಾರೆ.**

**ವ್ಯಕ್ತಿತ್ವ** ವಿಕಾಸವೆಂದರೆ ನಮ್ಮ ಚೈತನ್ಯದ ಜಾಗೃತಿ, ಅದರ ಅಭಿವ್ಯಕ್ತಿ. ಇದನ್ನು ಎಲ್ಲರೂ ಬಯಸುವರು. ಇಚ್ಛೆ ಇದ್ದರೆ ಸಾಲದು. ಇದಕ್ಕೆ ಬೇಕಾದ ಪ್ರಯತ್ನವೆಲ್ಲವನ್ನೂ ಮಾಡಬೇಕು. ಇದಕ್ಕೆ ಉಪಯೋಗವಾಗುವ ಎಲ್ಲ ಬಗೆಯ ಸಾಧನೆ ಸಲಕರಣೆಗಳನ್ನೂ ಉಪಯೋಗಿಸಬೇಕಾಗುವುದು. ಮಾರ್ಗದರ್ಶನವೂ ಬೇಕು. ವ್ಯಕ್ತಿತ್ವ ವಿಕಸನವೆಂಬುದು ಹಲವು ಗುರಿಗಳ ಸಂಕೀರ್ಣ ಮತ್ತು ಅಂತಿಮ ಫಲ. ಇದಕ್ಕೆ ನಮ್ಮನ್ನು ಕರೆದೊಯ್ಯುವ ಮಾರ್ಗದ ಪ್ರಥಮ ಹಂತಗಳು ಮತ್ತು ಇದಕ್ಕೆ ಬೇಕಾದ ಪೂರ್ವ ಸಿದ್ಧತೆಗಳನ್ನು ಕುರಿತು ಇಲ್ಲಿ ವಿವೇಚಿಸಲಾಗುವುದು.

## ಸ್ಥೂಲದಿಂದ ಸೂಕ್ಷ್ಮಕ್ಕೆ

ಉದಾತ್ತವಾದ ಗುರಿಯನ್ನು ಸೇರಲು ಶ್ರಮಿಸದಿದ್ದರೆ ಜೀವನಕ್ಕೆ ಅರ್ಥವಿರುವುದಿಲ್ಲ. ದೈನಂದಿನ ವ್ಯವಹಾರಗಳ ವರ್ತುಲದಲ್ಲಿ ಸಿಲುಕಿ ಸದಾ ಲಾಭದ ಮೇಲೆ ಗಮನವಿಟ್ಟು, ದುಡಿಯುತ್ತಿದ್ದರೆ, ಎಷ್ಟು ದುಡಿದರೂ ಪ್ರಯೋಜನವಿಲ್ಲ, ಜೀವನಕ್ಕೆ ಯಾವ ಅರ್ಥವೂ ಇಲ್ಲವೆಂದು ಬೇಸರವಾಗಿ ಅಶಾಂತಿ ತಲೆದೋರುವುದು. ಆದಕಾರಣವೇ ಪ್ರತಿಯೊಬ್ಬರೂ ಒಂದಲ್ಲ ಒಂದು 'ಯೋಗ್ಯ' ಗುರಿಯನ್ನು ಅರಸುವರು. ನಮ್ಮ ವ್ಯಕ್ತಿತ್ವದ ವಿಕಾಸಕ್ಕೆ ದುಡಿಯುವುದು ಅತ್ಯಂತ ಯೋಗ್ಯವಾದ ಉದಾತ್ತವಾದ ಅನಿವಾರ್ಯ ಉದ್ದೇಶ. ನಮ್ಮ ಚೈತನ್ಯವೆಂಬುದು ಸೂಕ್ಷ್ಮವಾದುದು, ಅತ್ಯಂತ ಸೂಕ್ಷ್ಮವಾದುದು. ಅದರ ವಿಕಾಸಕ್ಕೆ ಬಳಸಬೇಕಾದ ಸಾಧನಗಳೆಲ್ಲವೂ ಸ್ಥೂಲವಾದವು. ಈ ಸ್ಥೂಲ ಸಾಧನಗಳ ಮೂಲಕ ಸೂಕ್ಷ್ಮವಾದುದನ್ನು ಪಡೆಯುವ ಸ್ವಾರಸ್ಯಕರ ಮಾರ್ಗವೇ ವ್ಯಕ್ತಿತ್ವ ವಿಕಸನದ ಹಾದಿ. ಇದಕ್ಕೆ ಪ್ರಯತ್ನಿಸುವುದೇ ಉನ್ನತ ಜೀವನವೆಂಬುದು. ಗುರಿ ಉದಾತ್ತವಾಗಿದ್ದಷ್ಟೂ ಅದನ್ನು ಪಡೆಯುವ ಮಾರ್ಗ ದೀರ್ಘವಾಗಿ, ಅಲ್ಲಲ್ಲಿ ಜಟಿಲವಾಗಿ ಸಾಧನಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಪೂರ್ವ ಸಿದ್ಧತೆಗೆ, ಅಭ್ಯಾಸಗಳಿಗೆ ಸಾಕಷ್ಟು ಗಮನವೀಯದೆ, ತಾಳ್ಮೆಗೆಟ್ಟು ಅತ್ಯಂತ ಮೇಲಿನ ಸ್ಥಿತಿ ನಮಗೆ ಸಿದ್ಧಿಸಿರುವುದೆಂದು ವ್ಯವಹರಿಸ ತೊಡಗಿದರೆ, ಸರ್ವಜ್ಞ ಕವಿ ಹೇಳುವಂತೆ, "ಅದ್ವೈತಕ್ಕೆ ಹೋರಾಡಿ, ಇದ್ದುದನು ನೀಗಾಡಿ, ಉದ್ದನಾ ಮರವೇರಿ, ತಲೆಕೆಳಕಾಗಿ ಬಿದ್ದಂತೆ" ಆಗುವುದು. ಆದುದರಿಂದ ಕೆಲವು ಗುಣಗಳನ್ನು ಪಡೆಯಲು, ಸಾಮರ್ಥ್ಯಗಳನ್ನು ಹೊಂದಲು, ಕೆಲವು ಅರ್ಹತೆಗಳನ್ನು ಪಡೆಯಲು ಶ್ರಮಿಸಬೇಕು. ಸೂಕ್ಷ್ಮವಾದುದನ್ನು ಸ್ಥೂಲವಾದುದರ ಮೂಲಕ ಪಡೆಯುವ ರಹಸ್ಯವನ್ನು ತಿಳಿಯಬೇಕಾದುದು ಆವಶ್ಯಕ. ನಮಗೆ ಬೇಕಾದ ದೈಹಿಕ ಶಕ್ತಿ ಆಹಾರದ ಮೂಲಕ ಬರುವಂತೆ, ಇದು.

## ಮನಸ್ಸು-ಬುದ್ಧಿ-ಕರ್ಮ

ನಮ್ಮೆಲ್ಲರ ವ್ಯಕ್ತಿತ್ವಕ್ಕೂ ಮೂರು ಮುಖ್ಯವಾದ ಮುಖಗಳಿರುವುವು. ಅವೇ ಆಲೋಚನೆ, ಭಾವನೆ ಮತ್ತು ಕರ್ಮ. ಈ ಮೂರನ್ನೂ ಪ್ರತಿಯೊಬ್ಬರೂ ಮಾಡುತ್ತಿರುವರು. ಇವುಗಳ ರಹಸ್ಯಗಳನ್ನೂ ಪರಸ್ಪರ ಸಂಬಂಧಗಳನ್ನೂ ಇವುಗಳ ಹಿಂದಿರುವ ನಿಯಮಗಳನ್ನೂ ಅರಿತು ಮಾಡುವವರಲ್ಲಿ ಇವು ಶಕ್ತಿಗಳಾಗಿ ಪರಿಣಮಿಸುವುವು. ಇವನ್ನೇ ನಮ್ಮ ಶಾಸ್ತ್ರಗಳಲ್ಲಿ, ಉಪಾಸನಾ ಸಾಹಿತ್ಯದಲ್ಲಿ ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ ಎಂದು ಕರೆದಿರುವುದು. ಈ ಮೂರು ಶಕ್ತಿಗಳೂ ಎಲ್ಲಾ ವ್ಯಕ್ತಿಗಳಲ್ಲೂ ಭಿನ್ನ ಭಿನ್ನ ಪ್ರಮಾಣದಲ್ಲಿ ಇರುವುವು. ಕೆಲವರಲ್ಲಿ ಜ್ಞಾನಶಕ್ತಿ ಮುಂದಾಗಿರಬಹುದು. ಉಳಿದ ಶಕ್ತಿಗಳು ಅವರಲ್ಲಿ ಇಲ್ಲವೆಂದಲ್ಲ. ಅವು ಹಿಂದಾಗಿರುವುವು, ಅಷ್ಟೇ. ಮೂರು ಶಕ್ತಿಗಳೂ ಎಲ್ಲರಲ್ಲಿಯೂ ಸಮಪ್ರಮಾಣದಲ್ಲಿ ವೃದ್ಧಿಯಾಗಿರುವುದಿಲ್ಲ. ಇದರಿಂದಲೇ ಕೆಲವರು ವಿಚಾರವಂತರಾಗಿ ಕಂಡರೆ, ಕೆಲವರು ಭಾವುಕರಾಗಿ ಕಾಣುವರು, ಕೆಲವರು ಪ್ರಚಂಡ ಕರ್ಮಿಗಳಂತೆ ಇರುವರು. ಬುದ್ಧಿವಂತಿಕೆ, ಹೃದಯವಂತಿಕೆ ಮತ್ತು

ಕರ್ಮಪಟುತ್ವ—ಈ ಮೂರು ಗುಣಗಳೂ ಪ್ರತಿಯೊಬ್ಬರಿಗೂ ಬೇಕಾಗಿರುವುವು. ಇವುಗಳಲ್ಲಿ ಒಂದು ಮೇಲಲ್ಲ, ಇನ್ನೊಂದು ಕೀಳಲ್ಲ. ಒಬ್ಬರು ಇನ್ನೊಬ್ಬರನ್ನು ಮೇಲು ಅಥವಾ ಕೀಳು ದೃಷ್ಟಿಯಿಂದ ನೋಡಬೇಕಾಗಿಲ್ಲ. ಮೂರು ಶಕ್ತಿಗಳೂ ಮುಖ್ಯ. ಇವುಗಳಲ್ಲಿ ಒಂದು ಸರಿಯಾಗಿ ಬೆಳೆಯದಿದ್ದರೂ ವ್ಯಕ್ತಿತ್ವ ವಿಕಾಸ ಊನವಾಗುವುದು.

**ಜ್ಞಾನಶಕ್ತಿ**

ಜ್ಞಾನಶಕ್ತಿ ನಮ್ಮಲ್ಲಿ ವಿಕಾಸವಾಗಬೇಕಾದರೆ ನಮ್ಮ ಬುದ್ಧಿ ಶಕ್ತಿ ಬೆಳೆಯಬೇಕು. ಆಲೋಚನಾಶಕ್ತಿ, ಕಲ್ಪನಾಶಕ್ತಿ ನಮ್ಮೆಲ್ಲರಲ್ಲಿಯೂ ಇರುವುದು. ಇದು ಪ್ರಬುದ್ಧವಾಗಬೇಕಾದರೆ ಅದಕ್ಕೆ ಒಂದು ಗೊತ್ತಾದ ಗುರಿ ಮತ್ತು ಮಾರ್ಗ ಆವಶ್ಯಕ. ಶಾಸ್ತ್ರ ವ್ಯಾಸಂಗ ನಮ್ಮ ಬುದ್ಧಿಯ ಬೆಳವಣಿಗೆಗೆ ಸಹಾಯ ಮಾಡುವುದು. ವಿಜ್ಞಾನ, ಗಣಿತ, ತರ್ಕ ಮುಂತಾದ ವಿಷಯಗಳನ್ನು ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಸೇರಿಸಿರುವುದಕ್ಕೆ ಇದೇ ಕಾರಣ. ನಮ್ಮ ಆಲೋಚನೆ ತರ್ಕಬದ್ಧವಾಗಿರಬೇಕು, ಕ್ರಮಬದ್ಧವಾಗಿರಬೇಕು. ವಿದ್ಯಾರ್ಥಿಗಳಲ್ಲಿ ಕ್ರಮಬದ್ಧ ಆಲೋಚನೆ, ಕಾರಣಬದ್ಧ ವಾದಗಳು ಮತ್ತು ಸ್ವತಂತ್ರ ಆಲೋಚನಾಶಕ್ತಿ ಬೆಳೆಯಬೇಕೆಂಬ ಉದ್ದೇಶದಿಂದ ವಿಜ್ಞಾನ, ಗಣಿತ ಮುಂತಾದ ಬುದ್ಧಿಪ್ರಧಾನ ವಿಷಯಗಳನ್ನು ಪ್ರಾಥಮಿಕ ಶಿಕ್ಷಣದಲ್ಲಿಯೇ ಕಡ್ಡಾಯವಾಗಿ ಕಲಿಸಲಾಗುತ್ತದೆ. ಪ್ರತಿಯೊಂದು ಘಟನೆಗೂ ಸರಿಯಾದ ಕಾರಣವನ್ನು ತಿಳಿಯುವಂತೆ, ತಿಳಿಸುವಂತೆ ಎಲ್ಲಾ ಶಿಕ್ಷಣ ಕ್ರಮಗಳಲ್ಲಿಯೂ ಆಗ್ರಹಪಡಿಸಲಾಗುವುದು. ಕಾರಣ ಬದ್ಧವಲ್ಲದ ವಾದಗಳನ್ನು ಒಡ್ಡುವುದು, ಕಂಬಿ ಇಲ್ಲದೆ ರೈಲು ಗಾಡಿಯನ್ನು ಬಿಟ್ಟಂತೆ.

ಜ್ಞಾನವೇ ಕಲ್ಪನಾಶಕ್ತಿಯ ಆಧಾರ. ಸರಿಯಾದ ಮತ್ತು ಸಾಕಷ್ಟು ಪ್ರಮಾಣದ ಜ್ಞಾನವಿಲ್ಲದಿದ್ದರೆ ಕಲ್ಪನಾ ಸಾಮರ್ಥ್ಯ ಬರುವುದಿಲ್ಲ. ಅಂತಹವರ ಕಲ್ಪನೆಗೆ ಬೆಲೆಯೂ ಇಲ್ಲ. ಹಲವು ಶತಮಾನಗಳ ಹಿಂದೆಯೇ, ದೂರದರ್ಶಕ ಯಂತ್ರ ಇಲ್ಲದಿದ್ದ ಕಾಲದಲ್ಲಿಯೇ, ಭೂಮಿಯ ಆಕಾರ ಗುಂಡಾಗಿರುವುದನ್ನೂ ಭೂಮಿಯು ಸೂರ್ಯನ ಸುತ್ತ ಸುತ್ತುವುದೆಂದೂ ಗುರುಗ್ರಹದಿಂದ ಆಚೆ ಯುರೇನಸ್, ನೆಪ್ಚ್ಯೂನ್, ಪ್ಲೂಟೊ ಮುಂತಾದ ಗ್ರಹಗಳಿರುವುವೆಂದೂ ಕೇವಲ ಅನುಮಾನ ಮತ್ತು ಕಲ್ಪನೆಯಿಂದ ಅಂದಿನ ಖ್ಯಾತ ಗಣಿತಶಾಸ್ತ್ರಜ್ಞರು ಕಂಡುಹಿಡಿದರು. ಇವನ್ನು ವಾದಗಳ ಮೂಲಕ ಸತ್ಯವೆಂದು ಸಮರ್ಥಿಸಿದರು. ಹತ್ತಾರು ಶತಮಾನಗಳ ಅನಂತರ ಮಾನವ ಅಂತರಿಕ್ಷಕ್ಕೆ ಹಾರಿದ ಮೇಲೆ ಇವೆಲ್ಲಾ ಸತ್ಯಗಳೆಂದು ಕಣ್ಣಾರೆ ಕಂಡನು. ಈಗ ಇವು ಪ್ರಾಥಮಿಕ ಶಾಲೆಯ ವಿಜ್ಞಾನದ ಪಾಠಗಳಾಗಿವೆ. ಭೂಮಿಗೂ ಸೂರ್ಯನಿಗೂ ಇರುವ ದೂರವನ್ನು ಅತ್ಯಂತ ಕರಾರುವಾಕ್ಕಾಗಿ ಗಣಿತಶಾಸ್ತ್ರಜ್ಞರು ಕಂಡುಹಿಡಿದಾಗ ಇಂದು ಅನಂತ ದೂರವನ್ನು ಅಳೆಯಲು ಲಭ್ಯವಿರುವ ಸಾಧನಗಳು ಯಾವುವೂ ಅವರಿಗೆ ಇರಲಿಲ್ಲ. ಇವೆಲ್ಲಾ ಜ್ಞಾನಶಕ್ತಿಯ, ಬುದ್ಧಿಶಕ್ತಿಯ ಪ್ರಭಾವ. ಇವೆಲ್ಲಾ ಯಕ್ಷಿಣಿಯಂತೆ ಹೇಗೋ ಸಾಧ್ಯವಾಗಲಿಲ್ಲ. ಇವೆಲ್ಲಾ ಕಾರ್ಯ-ಕಾರಣ ಸಂಬಂಧಗಳ ಅಧ್ಯಯನದಿಂದ ದೋಷಮುಕ್ತವಾದ ಖಚಿತವಾದ ವಾದಸರಣಿಗಳ ಮೂಲಕ ತತ್ತ್ವಾನುಸಂಧಾನದಿಂದ ಸಾಧ್ಯವಾದುವು ಎಂಬುದನ್ನು ನಮ್ಮ ವಿದ್ಯಾರ್ಥಿಗಳಿಗೆ ಬುದ್ಧಿಗ್ರಾಹ್ಯವಾಗುವಂತೆ ತಿಳಿಸಲು ಯತ್ನಿಸುವುದೇ ಶಿಕ್ಷಣದ ಮೂಲೋದ್ದೇಶ. ಸ್ವತಂತ್ರ ಆಲೋಚನೆ ಇಲ್ಲದಿದ್ದರೆ ಹೊಸ ಸತ್ಯಗಳನ್ನು, ನಿಯಮಗಳನ್ನು ಕಂಡುಹಿಡಿಯಲಾಗುವುದಿಲ್ಲ. ಇವೆಲ್ಲಾ ಮಾನವನ ಜ್ಞಾನಶಕ್ತಿಯ ಪ್ರಖರತೆಗೆ ಸಾಕ್ಷಿಗಳು. ಇವುಗಳ ಅಧ್ಯಯನದಿಂದ ನಮ್ಮ ವಿದ್ಯಾರ್ಥಿಗಳ ಮತಿ ಹರಿತವಾಗುವುದು.

ಕಾರ್ಯ-ಕಾರಣ ಸಂಬಂಧ ವಿಜ್ಞಾನ ಶಾಸ್ತ್ರಗಳಲ್ಲಿ ಎಷ್ಟು ಸಮ್ಮತವೋ ಆಧ್ಯಾತ್ಮಿಕ ಜೀವನದಲ್ಲಿಯೂ ಅಷ್ಟೇ ಸಮ್ಮತ. ಸತ್ಯಗಳಲ್ಲಿ ಹಲವು ಮಟ್ಟಗಳಿವೆ. ಸತ್ಯ ಮೇಲಿನ ಮಟ್ಟದಲ್ಲಿ ಇದ್ದಷ್ಟೂ ಅದನ್ನು ತಿಳಿಯಲು ಹೆಚ್ಚು ಸೂಕ್ಷ್ಮಮತಿ ಬೇಕಾಗುವುದು. ಆಧ್ಯಾತ್ಮಿಕ ಸತ್ಯಗಳು ಲೌಕಿಕ ವಿಜ್ಞಾನ ಶಾಸ್ತ್ರಗಳ ಸತ್ಯಕ್ಕಿಂತ ಹೆಚ್ಚು ಆಳವೂ ಸೂಕ್ಷ್ಮವೂ ಆಗಿರುವುವು. ಅವನ್ನು ತಿಳಿಯಲು ಯತ್ನಿಸುವವರಿಗೆ ಜ್ಞಾನಶಕ್ತಿ ಇನ್ನೂ ಅಧಿಕವಾಗಿ ಬೇಕಾಗಿರುವುದು. ಇದನ್ನು ಪಡೆಯುವ ಮಾರ್ಗವನ್ನೇ ಜ್ಞಾನ ಯೋಗವೆಂದು ಕರೆದಿರುವುದು. ಕೆಳಮಟ್ಟದ ಸತ್ಯಗಳನ್ನು ಸರಿಯಾಗಿ ಅರಿತುಕೊಳ್ಳಲಾರದವರು ಉನ್ನತ ಸತ್ಯಗಳನ್ನು ತಿಳಿಯಲಾರರು. ಇದಕ್ಕಾಗಿಯೇ ಕ್ರಮವಾದ ಶಿಕ್ಷಣ ಬೇಕಾಗಿರುವುದು. ವಿದ್ಯಾರ್ಥಿ ಎಂದರೆ ಸತ್ಯಾರ್ಥಿ, ಜ್ಞಾನಾರ್ಥಿ. ಅಂಥವರಿಗೆ ಜ್ಞಾನಶಕ್ತಿ ಪ್ರಾಪ್ತವಾಗುವುದು. ಇದರಿಂದ ಸತ್ಯ ಅಸತ್ಯಗಳನ್ನು ತಿಳಿಯಲು ಸಾಧ್ಯವಾಗುವುದು. ಹೀಗೆ ವ್ಯಕ್ತಿತ್ವದ ಈ ಮುಖ ಬೆಳಗುವುದು.

**ಮನಃಶಕ್ತಿ**

ನಮ್ಮ ವ್ಯಕ್ತಿತ್ವದ ಇನ್ನೊಂದು ಭಾಗವೇ ಮನಸ್ಸು. ಬುದ್ಧಿಯ ಜತೆಗೆ ನಮ್ಮ ಮನಸ್ಸೂ ಶ್ರೀಮಂತವಾಗಬೇಕು. ಇದು ಶಾಸ್ತ್ರ ವ್ಯಾಸಂಗದಿಂದ ಆಗುವುದಿಲ್ಲ. ಮನಸ್ಸಿನ ಬೆಳವಣಿಗೆಗೆ ಸಹಾಯಕವಾಗುವ ಸಾಧನಗಳೆಂದರೆ ಸಾಹಿತ್ಯ ಮತ್ತು ಕಲೆ. ಬುದ್ಧಿ ಎಂಬ ಕಬ್ಬಿಗೆ ರಸವನ್ನು ನೀಡುವುವು ಇವು. ನಮ್ಮ ಮನಸ್ಸಿನಲ್ಲಿ ಭಾವನೆಗಳು ಇರುವುವು. ಅವಕ್ಕೆ ಸರಿಯಾದ ರೂಪವನ್ನು ನೀಡಬೇಕಾದರೆ ಅವು ವ್ಯಕ್ತವಾಗಬೇಕು. ನಾಳಗಳಲ್ಲಿ ರಕ್ತ ಹರಿಯುವಂತೆ ನಮ್ಮ ಮನಸ್ಸಿನಲ್ಲಿ ಭಾವನೆಗಳು ಸಂಚರಿಸಬೇಕು. ನಮ್ಮ ವಿದ್ಯಾರ್ಥಿಗಳು ಶ್ರೇಷ್ಠವಾದ ಸಾಹಿತ್ಯವನ್ನು ಓದಬೇಕು. ಮನಸ್ಸಿಟ್ಟು ಓದಿದಾಗ ಅದರಲ್ಲಿರುವ ಭಾವನೆಗಳು ನಮ್ಮ ಮನಸ್ಸಿನಲ್ಲಿ ಸಂಚಾರವಾಗುವುವು. ಮಹಾಭಾರತದ ಕಥೆಯನ್ನು ಓದಿದಾಗ ಕರ್ಣನ ತ್ಯಾಗ, ಹರಿಶ್ಚಂದ್ರನ ಸತ್ಯನಿಷ್ಠೆ ಮುಂತಾದುವು ನಮ್ಮ ಮನಸ್ಸನ್ನು ಕಲಕುತ್ತವೆ. ವಿದ್ಯಾರ್ಥಿಗಳಿಗೆ ಈ ಅನುಭವವನ್ನು ನೀಡುವುದಕ್ಕಾಗಿಯೇ ಸಾಹಿತ್ಯದ ಪಾಠಗಳನ್ನು ಮೊದಲನೆಯ ತರಗತಿಯಿಂದಲೇ ಪ್ರಾರಂಭಿಸಿರುವುದು.

ಪ್ರೌಢರಾದ ಯುವಕರಿಗೆ ಇದು ಇನ್ನೂ ಮುಖ್ಯ. ಅವರಿಗೆ ಭಾಷೆಯ ಪ್ರೌಢಿಮೆಯ ಜತೆಗೆ ಭಾವನೆಗಳ ಅಭಿವ್ಯಕ್ತಿಯೂ ಬೇಕಾಗುವುದು. ಇದು ಇಂದಿನ ಸಾಫ್ಟ್‌ವೇರ್ ಯುಗದ ನೌಕರಿ ಅವಾಂತರದಲ್ಲಿ ಹಿಂದೆ ಬಿದ್ದಿದೆ. ಪಿ.ಯು.ಸಿ. ಓದಿದವರು ಬಿ.ಇ.ಗೆ ಸೇರಿಕೊಳ್ಳಬೇಕಾದರೆ ಭಾಷೆಗಳ ಅಂಕವನ್ನು ಪರಿಗಣಿಸುವುದಿಲ್ಲವೆಂಬ ಕಾರಣದಿಂದ ವಿದ್ಯಾರ್ಥಿಗಳು ಭಾಷಾ ವ್ಯಾಸಂಗವನ್ನು ನಿರ್ಲಕ್ಷಿಸುತ್ತಿರುವರು. ಇದರಿಂದ ಅವರ ಭಾಷೆ ನೀರಸವಾಗಿ, ವ್ಯವಹಾರಕ್ಕೆ ಸೀಮಿತವಾಗಿ ಹೃದಯವು ಶುಷ್ಕವಾಗುತ್ತಿದೆ. ಸಾಹಿತ್ಯ, ಸಂಗೀತ, ಕಲೆಗಳು ಹೃದಯದ ಹೊಲಕ್ಕೆ ನೀರನ್ನು ಹರಿಸಿ ರಸಾನುಭವವನ್ನು ನೀಡುತ್ತವೆ. ಇದನ್ನು ಮಾಡದವರು ಪಶುಗಳಂತಾಗುವರು. ಅವರು ವ್ಯಕ್ತಿಗಳನ್ನು ಪ್ರೀತಿಸುವ ಬದಲು ಡಾಲರ್‌ಗಳನ್ನು ಪ್ರೀತಿಸುವರು.

ವಿಜ್ಞಾನ ಕ್ಷೇತ್ರದಲ್ಲಿ "ಸತ್ಯಗಳು ಆಗಲೇ ಇವೆ. ಅವನ್ನು ನಾವು ಸೃಷ್ಟಿಸುತ್ತಿಲ್ಲ, ಆದರೆ ಕಂಡುಹಿಡಿಯುತ್ತಿರುವೆವು, ಅಥವಾ ಗಮನಿಸುವೆವು ಇಲ್ಲವೇ ಗುರುತಿಸುವೆವು. ನಾವು ಕಂಡುಹಿಡಿಯುವುದಕ್ಕೆ ಮೊದಲೂ ಅವು ಇದ್ದವು. ನ್ಯೂಟನ್ ಕಂಡುಹಿಡಿಯುವುದಕ್ಕೆ ಮುಂಚೆಯೂ ಗುರುತ್ವಾಕರ್ಷಣ ನಿಯಮ ಇತ್ತು" ಎಂದು ಹೇಳುವರು. ಅದರಂತೆಯೇ ಹೃದಯಾಭಿಜ್ಞತೆಯ ಕ್ಷೇತ್ರದಲ್ಲಿ "ಭಾವನೆಗಳು ನಮ್ಮ ಸುತ್ತಮುತ್ತ ಇವೆ. ಆದರೆ ಅವು ನಮ್ಮ ಹೃದಯದಲ್ಲಿ ಸಂಚರಿಸಿದಾಗಲೇ ಅವು ನಮ್ಮ ಪಾಲಿಗೆ ಜೀವಂತವಾಗುವುವು" ಎಂದು ಹೇಳುವರು. ಯಾರೋ ತಮ್ಮ ಮಗುವನ್ನು ಮುದ್ದಿಸಿದರೆ, ನಮ್ಮ ಮನಸ್ಸಿನಲ್ಲಿ ಪ್ರೀತಿ ಹರಿಯುವುದಿಲ್ಲ. ಅದನ್ನು ನಾವೇ ಮಾಡಬೇಕು. ನಮ್ಮ ಹೃದಯದಲ್ಲಿಯೂ ಸ್ನೇಹ, ಪ್ರೀತಿ, ವಿಶ್ವಾಸಗಳು ಜಿನುಗಬೇಕು. ವರಕವಿಗಳಾದ ಕುವೆಂಪು ಅವರು ತಮ್ಮ ಮೇರುಕೃತಿಯಾದ ಶ್ರೀರಾಮಾಯಣ ದರ್ಶನಂ ಎಂಬುದನ್ನು ಕುರಿತು ಹೇಳುವಾಗ ರಾಮಾಯಣವೆನ್ನುವುದು ಕವಿಗಳು ಒಮ್ಮೆ ಸೃಷ್ಟಿಸಿದ ಕಾವ್ಯವಲ್ಲ. ಪ್ರತಿಯೊಂದು ಬಾರಿ ಅದನ್ನು ಓದುವಾಗಲೂ ಅದರಲ್ಲಿ ಬರುವ ಪಾತ್ರಗಳು ಓದುಗರ ಮನಸ್ಸಿನಲ್ಲಿ ಮರುಸೃಷ್ಟಿಯಾಗುವುವು, ಅವು ಓದುಗರ ಮನಸ್ಸಿನ ಮೇಲೆ ಬೀರುವ ಪರಿಣಾಮದಿಂದ ಓದುಗರನ್ನು ಸೃಷ್ಟಿಸಿದಂತಾಗುವುದು ಮತ್ತು ಅದು ಕವಿಗಳನ್ನೇ ಸೃಷ್ಟಿಸುವುದು ಎಂದು ಹೇಳಿರುವರು. ಆದಕಾರಣವೇ ಅವರನ್ನು ರಸಋುಷಿ ಎಂದು ಕರೆದಿರುವುದು. ನಮ್ಮ ವಿದ್ಯಾರ್ಥಿಗಳು ಶ್ರೇಷ್ಠವಾದ ಸಾಹಿತ್ಯವನ್ನು ಓದಬೇಕು, ಒಳ್ಳೆಯ ಸಂಗೀತವನ್ನು ಕೇಳಬೇಕು. ರಸಭರಿತವಾದ ನಾಟಕಗಳನ್ನು ನೋಡಬೇಕು. ಕಲೆಗಳ ಅಭ್ಯಾಸವನ್ನು ಮಾಡಬೇಕು. ಅವರ ಮನಸ್ಸಿನಲ್ಲಿಯೂ ಸ್ನೇಹ, ಭ್ರಾತೃತ್ವ, ಮಾನುಷಪ್ರೀತಿ ವೃದ್ಧಿಯಾಗಬೇಕು. ಓದುವುದು ನಮಗೆ ಅರ್ಥವಾದರೆ ಸಾಲದು. ಅದನ್ನು ಅನುಭವಿಸಬೇಕು.

ಸತ್ಯಗಳಲ್ಲಿ ಹಲವು ಮಟ್ಟಗಳಿರುವಂತೆ, ಪ್ರೀತಿಯಲ್ಲಿಯೂ ಹಲವು ಮಟ್ಟಗಳಿವೆ. ನಮ್ಮ ಹಣ, ನಮ್ಮ ಸಂಸಾರ, ನಮ್ಮ ನೆಂಟರು ಇಷ್ಟು ಮಾತ್ರ ಪ್ರೀತಿಸುವುದು ಸರ್ವೇ ಸಾಮಾನ್ಯ. ನಮ್ಮ ಹೃದಯ ಶ್ರೀಮಂತವಾದಂತೆ, ವಿಕಾಸವಾದಂತೆ ನಮ್ಮ ಪ್ರೀತಿಯ ಪರಿಧಿ ವಿಸ್ತಾರವಾಗುವುದು. ಅವ್ಯಾಜ ಪ್ರೀತಿ, ವಿಶ್ವಪ್ರೇಮ ಮುಂತಾದುವು ನಮ್ಮ ಶಬ್ದಕೋಶದಲ್ಲಿ ಮಾತ್ರ ಇದ್ದರೆ ಸಾಲದು. ಅವು ನಮ್ಮಲ್ಲಿ ಮೂಡಬೇಕು. ಇದಕ್ಕೆ ಕಲಾಭಿರುಚಿ, ರಸಾಸ್ವಾದನೆ, ಯೋಗ್ಯ ಭಾವನೆಗಳ ಆಸ್ವಾದನೆ ನಮಗೆ ನೆರವಾಗುವುವು. ತೋರಿಕೆಯ ಪ್ರೀತಿ ಬೇಗನೆ ಬತ್ತಿಹೋಗಿ ನಮ್ಮನ್ನು ಕಪಟಿಗಳನ್ನಾಗಿ ಮಾಡುವುದು. ನಿಜವಾದ ಆಳವಾದ ಭಾವನೆಗಳು ನಮ್ಮ ಹೃದಯವನ್ನು ರಸದ ಮಡುವನ್ನಾಗಿಸಿ ಶ್ರೀಮಂತಗೊಳಿಸುವುವು. ನಮ್ಮಲ್ಲಿರುವ ಪ್ರೀತಿಯ ಆಧಿಕ್ಯದಿಂದ ಅದೊಂದು ಶಕ್ತಿಯಾಗುವುದು. ಆದರೆ ಅದನ್ನು ಯಾವ ವಸ್ತುವಿನ ಕಡೆ ಹರಿಸಬೇಕೆಂಬ ವಿವೇಕ ಜ್ಞಾನಶಕ್ತಿಯಿಂದ ಬರುವುದು. ಇಂದು ಇದ್ದು ನಾಳೆ ನಾಶವಾಗುವ ತಾತ್ಕಾಲಿಕ ವಸ್ತುಗಳ ಮೇಲೆ ಇಷ್ಟು ಪ್ರಶಸ್ತವಾದ ಪ್ರೇಮಶಕ್ತಿಯನ್ನು ಹರಿಸಿದರೆ ಅದು ದುಃಖದಲ್ಲಿ ಪರ್ಯವಸಾನವಾಗುವುದು. ಶಾಶ್ವತವಾದುದರ ಮೇಲೆ ಅದನ್ನು ನೆಲೆಯಾಗಿ ಇಟ್ಟರೆ ನಮ್ಮ ಜೀವನ ಉದ್ಧಾರವಾಗುವುದು. ಯಾವುದೋ ಪ್ರಯೋಜನಕ್ಕಾಗಿ ಪ್ರೀತಿಸುವುದಲ್ಲ,ಪ್ರೀತಿಗಾಗಿ ಪ್ರೀತಿ, ಇದೇ ಅದರ ಅತ್ಯಂತ ಶ್ರೇಷ್ಠ ಸ್ಥಿತಿ. ಇದನ್ನು ಪಡೆಯುವ ವಿಧಾನವನ್ನು ಭಕ್ತಿಯೋಗ ಎನ್ನುವರು.

*(ಮುಂದುವರೆಯುವುದು)*

## ಬದುಕಿನ ಆಸಕ್ತಿಯು ಮರಳಿ ಬಂತೆ?

ಮುಲ್ಲಾ ನಸ್ರುದ್ದೀನ್ ಒಮ್ಮೆ ಹಾದಿಯಲ್ಲಿ ನಡೆದಿದ್ದ. ರಸ್ತೆಯ ಬದಿಯಲ್ಲಿ ಒಳ್ಳೆಯ ಉಡುಗೆತೊಡುಗೆಗಳನ್ನು ತೊಟ್ಟಿದ್ದ ಅದೇ ಊರಿನ ಒಬ್ಬ ಶ್ರೀಮಂತ ಮಂಕಾಗಿ ಕುಳಿತಿದ್ದ. ಆತನ ಕೈಯಲ್ಲಿ ಒಂದು ಚೀಲ ಇತ್ತು. ಆತನಿಗೆ ಹಣ, ಮನೆಗಳಿಗೆ ಕೊರತೆ ಇರಲಿಲ್ಲ. ಆತನ ಮಡದಿ ಹಾಗು ಮಕ್ಕಳೂ ಒಳ್ಳೆಯವರೇ. ಆದರೂ ಆತನ ಮೋರೆ ಸಪ್ಪಗಿತ್ತು. ಉತ್ಸಾಹವೇ ಇರಲಿಲ್ಲ.

ಇದನ್ನು ಕಂಡ ಮುಲ್ಲಾನಿಗೆ ಬೆರಗಾಯಿತು. ಆತನನ್ನು ಕೇಳಿದ: "ಅಣ್ಣಾ... ಏನಾಯಿತು? ಹೀಗೇಕೆ ಮಂಕಾಗಿದ್ದೀಯಾ? ನಾನೆಂದೂ ನಿನ್ನ ಸಪ್ಪೆಮೋರೆ ನೋಡಿರಲಿಲ್ಲ.." ಆತ ಉತ್ತರಿಸಿದ : "ಏನೂ ಆಗಿಲ್ಲ. ಅದೇ ಚಿಂತೆಯಾಗಿದೆ, ಬದುಕಿನಲ್ಲಿ ಆಸಕ್ತಿಯೇ ಇಲ್ಲ. ಏನು ಮಾಡಲಿ?"

ಮುಲ್ಲಾ ಅವನಿಗೆ ಬಾಯಿಂದ ಉತ್ತರಿಸಲಿಲ್ಲ. ಆ ಗೆಳೆಯನ ಕೈಯ್ಯಲ್ಲಿ ಇದ್ದ ಚೀಲವನ್ನು ಕಸಿದುಕೊಂಡ! ತಡಮಾಡದೆ ದಾರಿಯ ಗುಂಟ ಓಡಿಬಿಟ್ಟ. ಶ್ರೀಮಂತ ಗೆಳೆಯ 'ಹೋ..' ಅಂತ ಕೂಗುತ್ತಾ ಮುಲ್ಲಾನನ್ನು ಹಿಂಬಾಲಿಸಹತ್ತಿದನು. ಈಗ ಅವನ ಶರೀರದಲ್ಲಿ ಉತ್ಸಾಹವು ಕುಣಿಯುತ್ತಿತ್ತು. ಮುಲ್ಲಾ ಆತನನ್ನು ಅಲ್ಲಿ... ಇಲ್ಲಿ... ಎಲ್ಲ ಕಡೆ ಸುತ್ತಿಸಿ ಕೊನೆಗೆ ಒಂದು ಪೊದೆಯ ಹತ್ತಿರ ಆ ಚೀಲವನ್ನು ಎಸೆದು ಆ ಪೊದೆಯ ಮರೆಯಲ್ಲೇ ಒಂದು ಕಡೆ ಅಡಗಿಕೊಂಡನು.

ಕೊಂಚ ಹೊತ್ತಿನಲ್ಲಿ ಆ ಶ್ರೀಮಂತ ಅಲ್ಲಿಗೆ ಓಡೋಡಿ ಬಂದು ಬಿದ್ದಿದ್ದ ತನ್ನ ಚೀಲವನ್ನು ಎತ್ತಿಕೊಂಡ. ಆಗ, ಮುಲ್ಲಾ ಪೊದೆಯ ಮರೆಯಿಂದ ಈಚೆಗೆ ಬಂದು ಶ್ರೀಮಂತನನ್ನು "ಏನಣ್ಣಾ, ನಿನ್ನ ಬದುಕಿನ ಆಸಕ್ತಿಯು ಮರಳಿ ಬಂತೆ?" ಎಂದು ಕೇಳಿದ. ಅದಕ್ಕೆ ಶ್ರೀಮಂತ, "ಬಂತಯ್ಯಾ... ಬಂತು" ಎನ್ನುತ್ತಾ ನಡೆದ.

(ಒಂದು ಸೂಫಿ ಕಥೆ. ಸಂಗ್ರಹ : ಟಿ.ವಿ.ಮೋಹನ್‌ಪ್ರಕಾಶ್)